ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಮಡಿಕೇರಿ

ಸಿ.ಸಿ.ನಂಃ **1831/2025**

ಪಿರ್ಯಾದುದಾರು ರಾಜ್ಯದ ಪರ ಮಡಿಕೆರೀ ಗ್ರಾಮಂ◌ಾತರ ಆರಕ್ಷಕ ಠಾಣೆ

**ವಿರುದ್ಧ**

ಆರೋಪಿ/ಗಳು

1. ರಾಮು ಬಿ.ಕಲಮಕರ್,
ತಂದೆಃ ಪೌತಿ ಬಸವರಾಜು,
ಪ್ರಾಯ **34** ವರ್ಷ,
ವಾಸಃ ಹರಳಯ್ಯ ಕಾಲೋನಿ,
ಬೈಲ್ ಹೊಂಗಲ್ ತಾಲ್ಲೂಕು,
ಬೆಳಗಾವಿ ಜಿಲ್ಲೆ.

2. ಬೆಳ್ಳಪ್ಪ ಎ.ಕೆ.,
ತಂದೆಃ ಕುಟ್ಟಪ್ಪ ಎ.ಎ.,
ಪ್ರಾಯ 46 ವರ್ಷ,
ವಾಸಃ ಮ.ನಂ.169,
ಭಗವತಿ ನಗರ, ಮಡಿಕೇರಿ

## ಆಪಾದನೆ

ಶ್ರೀಮತಿ ವಿನುತ ಡಿ.ಎಸ್. ಬಿ.ಎಸ್.ಸಿ. (ಸೆರಿಕಲ್ಚರ್), ಎಲ್.ಎಲ್.ಬಿ. ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,

Scanned with OKEN Scanner

...ಕ್ಕೆ ಈಗ ನಿ...

ಉತ್ತರ: ಆಗ...

ದಿನಾಂಕ 27.03.2025 ರಂದು ಸಮಯ ಮಧ್ಯಾಹ್ನ 3.30 ಗಂಟೆಗೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಕಾಟಕೇರಿ ಗ್ರಾಮದ ಪ್ರಶಾಂತಿ ಹೋಂ ಸ್ಟೇ ಮುಂದೆ ಹಾದು ಹೋಗಿರುವ ಮಡಿಕೇರಿ-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಚಾಸಾ-1 ವಿನಂತ್ ಕೆ.ಬಿ. ರವರಿಗೆ ಸೇರಿದ ಕೆಎ-12-ಆರ್-1221ರ ಮೋಟಾರ್ ಸೈಕಲ್ಲಿನಲ್ಲಿ ಮೃತ ಶರತ್ ರವರು ಕೆಲಸ ಮುಗಿಸಿಕೊಂಡು ಮದೆನಾಡಿನಿಂದ ಮಡಿಕೇರಿಯಲ್ಲಿರುವ ತಮ್ಮ ಮನೆಗೆ ಹೋಗುತ್ತಿರುವಾಗ ಅವರ ಬೈಕಿನ ಮುಂದೆ 2ನೇ ಆರೋಪಿಯಾದ ನೀವು ಕೆಎ-09-ಸಿ-2477ರ ಕಾರನ್ನು ಚಲಾಯಿಸುತ್ತಿದ್ದು ಕಾಟಕೇರಿ ಗ್ರಾಮದ ಪ್ರಶಾಂತಿ ಹೋಂ ಸ್ಟೇ ಬಳಿ ಅಚಾನಕ್ಕಾಗಿ 2ನೇ ಆರೋಪಿಯಾದ ನೀವು ಯಾವುದೇ ಮುನ್ಸೂಚನೆ ನೀಡದೆ ನಿಮ್ಮ ಕಾರಿಗೆ ಬ್ರೇಕ್ ಹಾಕಿದ್ದರಿಂದ ನಿಮ್ಮ ಹಿಂದೆ ಮೃತ ಶರತ್ ರವರು ಬರುತ್ತಿದ್ದ ಬೈಕ್ ನಿಮ್ಮ ಕಾರಿನ ಹಿಂಬದಿಗೆ ಡಿಕ್ಕಿಯಾಗಿ ಮೃತ ಶರತ್ ರವರು ಬೈಕ್ ಸಮೇತ ರಸ್ತೆಯ ಬಲ ಬದಿಗೆ ಬಿದ್ದಿದ್ದು, ಆ ಸಮಯದಲ್ಲಿ 1ನೇ ಆರೋಪಿಯಾದ ನೀವು ಕೆಎ-22-ಎಎ-1835ರ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲಿಸಿಕೊಂಡು ಬಂದು ರಸ್ತೆಯಲ್ಲಿ ಬೈಕ್ ಸಮೇತ ಬಿದ್ದಿದ್ದ ಶರತ್ ರವರ ತಲೆಯ ಮೇಲೆ ನಿಮ್ಮ ಲಾರಿಯ ಹಿಂಬದಿಯ ಬಲಭಾಗದ ಟಯರ್ ಹತ್ತಿದ್ದು ಆ ಮೂಲಕ 1 ಮತ್ತು 2ನೇ ಆರೋಪಿಗಳಾದ ನೀವುಗಳು ಕಲಂ 281 ಬಿ.ಎನ್.ಎಸ್.ಎಸ್. ರಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ, ಮೇಲ್ಕಂಡ ದಿನಾಂಕ ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀವು ಮೇಲ್ಕಂಡ ರೀತಿಯಲ್ಲಿ ಅಪಘಾತ ಮಾಡಿದ ಪರಿಣಾಮ ಬೈಕ್ ಸಮೇತ ರಸ್ತೆಯ ಬಲ ಬದಿಗೆ ಬಿದ್ದಿದ್ದ ಶರತ್ ರವರ ತಲೆಯ ಮೇಲೆ 1ನೇ ಆರೋಪಿಯಾದ ನಿಮ್ಮ ಲಾರಿಯ ಹಿಂಬದಿಯ ಬಲಭಾಗದ ಟಯರ್ ಹತ್ತಿ ಶರತ್ ರವರು ಸ್ಥಳದಲ್ಲಿಯೇ ಮೃತಪಟ್ಟಿದ್ದು ಆ ಮೂಲಕ 1ನೇ ಆರೋಪಿಯಾದ ನೀವು ಬಿ.ಎನ್.ಎಸ್. ಕಲಂ 106(1)ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಸದರಿ ಆರೋಪಣೆಯು ನನ್ನ ಸಂಜ್ಞಾನದಲ್ಲಿದ್ದು ವಿಚಾರಣೆಯು ಇದೇ ನ್ಯಾಯಾಲಯದಲ್ಲಿ ನಡೆಯುವಂತೆ ನಾನು ನಿರ್ದೇಶಿಸಿರುತ್ತೇನೆ.

Scanned with OKEN Scanner

ಪ್ರಶ್ನೆ: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರ: ಆರೋಪಿ–1 ತಿಳಿಯಿತು.

ಆರೋಪಿ–2 ತಿಳಿಯಿತು

ಪ್ರಶ್ನೆ: ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ? ಅಥವಾ ಪ್ರತಿರಕ್ಷೆ ಮಾಡಿಕೊಳ್ಳಬಯಸುವಿರೋ?

ಉತ್ತರ: ಆರೋಪಿ–1 ಇಲ್ಲ ವಿಚಾರಣೆಯಾಗಲಿ

ಆರೋಪಿ–2 ಇಲ್ಲ. ವಿಚಾರಣೆಯಾಗಲಿ.

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿನಾಂಕ 22.01.2026 ರಂದು ದೃಢೀಕರಿಸುತ್ತೇನೆ.

22/1/26

C/C ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಮಡಿಕೇರಿ.

Scanned with OKEN Scanner